**ಅಸಲು ದಾವಾ ನಂಃ 19/2023**
**ಪಿ.ಡಬ್ಲ್ಯೂಃ1 ,**

**ದಿನಾಂಕ :07-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮಂದುವರೆದ ಪಾಟಿ ಸವಾಲು :- ಶ್ರೀ. ಬಿ.ಬಿ.ಬಿ. ಪ್ರತಿವಾದಿ ಪರ ವಕೀಲರಿಂದ**

ಲಕ್ಷೀ ಮತ್ತು ಆವಂತಿಕಾ ನನ್ನ ಮಕ್ಕಳು. ಲಕ್ಷೀ, ಆವಂತಿಕಾ , ದೀನಾನಾಥ ಮತ್ತು ನನ್ನ 2018-19ರ ಬ್ಯಾಂಕ ಖಾತೆಯ ಸ್ಟೇಟ್ ಮೆಂಟ್ ಏನಾದರೂ ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ದಿನಾನಾಥರ ಬ್ಯಾಂಕ ಖಾತೆ ಇಲ್ಲಾ, ನನ್ನ ಬ್ಯಾಂಕ ಖಾತೆಯ ಸ್ಟೇಟ್ ಮೆಂಟ್ ಹಾಕುತ್ತೇನೆ ಆದರೆ ಲಕ್ಷೀ ಮತ್ತು ಆವಂತಿಕಾ ಇವರ ಬ್ಯಾಂಕ ಸ್ಟೇಟಮೆಂಟ್ ಹಾಕಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಲಕ್ಷೀ ಮತ್ತು ಆವಂತಿಕಾ ಮತ್ತು ನನ್ನ ಸಂಬಂಧ ಚೆನ್ನಾಗಿ ಇದೆ. ದಿ: 20-08-2025 ರಂದು ನಾನು ಸಾಕ್ಷಿ ಪ್ರಮಾಣ ಪತ್ರ ಸಲ್ಲಸಿದ ದಿನದಂದು ದಿನಾನಾಥ ಇವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇರಲಿಲ್ಲಾ ಎಂಬ ಪ್ರಶ್ನೆಗೆ ಸಾಕ್ಷಿ ತೊಂದರೆ ಇತ್ತು ಎಂದು ನುಡಿಯುತ್ತಾರೆ. ದಿ: 20-08-2025 ರ ಮುಂಚೆ 5-6 ತಿಂಗಳಿನಿಂದ ದಿನಾನಾಥ ಇವರಿಗೆ ನಡೆದಾಡಲು ಆಗುವುದಿಲ್ಲಾ. ದಿನಾನಾಥ ಇವರ ವಿರುದ್ದ ನಾನು ಸಲ್ಲಿಸಿದ ಓ.ಎಸ್. ನಂ: 7/2025 ರಲ್ಲಿ ದಿ: 11-07-2025 ರಂದು ದಿನಾನಾಥ ಇವರು ಈ ನ್ಯಾಯಾಲಯಕ್ಕೆ ಬಂದು ಓ.ಎಸ್. ನಂ: 7/2025 ರಂದು ಬಂದು ತಮ್ಮ ಪ್ರಮಾಣ ಪತ್ರದಲ್ಲಿ ತಕರಾರು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಅವರು ಅವರಿಗೆ ನ್ಯೂನ್ಯತೆ ಇದ್ದು ಆದರೆ ಅವರು ಆ ದಿನ ಬಂದು ಪ್ರಮಾಣ ಪತ್ರ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಓ.ಎಸ್. ನಂ117/2024 ರಲ್ಲಿ ಸುಲಭಾ ಇವರು ನನ್ನ ಮಗಳು ಆವಂತಿಕಾ ಇವರಿಗೆ ಅಧಿಕಾರ ಪತ್ರ ಬರೆದು ಕೊಟ್ಟಿದ್ದಾರೆಂದು ನಂತರ ಗೊತ್ತಾಯಿತು. ಸದರಿ ಅಧಿಕಾರಿ ಪತ್ರಕ್ಕೆ ನಾನು ಮತ್ತು ದಿನಾನಾಥ ಇವರು ಸಹಿ ಹಾಕಿದ್ದೇವೆ ಎಂದರೆ ಸರಿ. ಸುಲಭಾ ಇವರು ಆವಂತಿಕಾಗೆ ಬರೆದುಕೊಟ್ಟ ಅಧಿಕಾರ ಪತ್ರದಲ್ಲಿ ದಿನಾನಾಥ ಇವರು ದಿ: 19-08-2025 ರಂದು ಗುಲಬರ್ಗಾಕ್ಕೆ ಬಂದು ನೋಟರಿ ಸಮಕ್ಷಮ

ಅಧಿಕಾರ ಪತ್ರಕ್ಕೆ ಸಹಿ ಮಾಡಿದ್ದಾರೆ ಎಂದರೆ ಸರಿ. ನನ್ನ ಮಕ್ಕಳ ಪೈಕಿ ಬಬಿಂದು ಇವರನ್ನು ಸಂಜಯ ದೇವಪ್ಪ ಇವರನ್ನು ಮೌಖಿಕವಾಗಿ ದತ್ತಕ ಕೊಟ್ಟಿದ್ದೇನೆ ಯಾವ ದಿನಾಂಕ ತಿಂಗಳು ನನೆಪಿಲ್ಲಾ. ಅದೇ ರೀತಿ ಛಾಪಾ ಕಾಗದ ಮೇಲೆ ಬರೆಯಲಾಗಿದೆ. ನಾವು 4 ಜನ ಅಣ್ಣ ತಮ್ಮಂದಿರು ಸ.ನ. 53 ರಲ್ಲಿ 8 ಎಕರೆ 8 ಗುಂಟೆ, 8 ಎಕರೆ 7 ಗುಂಟೆ ಈ ರೀತಿಯಾಗಿ ಸಮನಾಗಿ ಪಾಲು ಮಾಡಿಕೊಂಡಿದ್ದೇವೆ ಎಂದರೆ ಸರಿ. ಅದೇ ರೀತಿ ಸ.ನ. 54, 55, 50, 333 ಈ ಜಮೀನುಗಳನ್ನು ನಾವು 4 ಜನ ಅಣ್ಣ ತಮ್ಮಂದಿರು ಸಮನಾಗಿ ಪಾಲು ಮಾಡಿಕೊಂಡಿದ್ದೇವೆ ಎಂದರೆ ಸರಿ. ನಂತರ ಸಣ್ಣ ತಮ್ಮ ಸಂಜು ಇವರಿಗೆ ಹೆಂಡತಿ ಇದ್ದು ಇಬ್ಬರು ಯಾವುದೇ ಸಂತಾನ ಇಲ್ಲದೇ ಮರಣ ಹೊಂದಿದ್ದಾರೆ ಎಂದರೆ ಸರಿ. ಸಂಜು ಇವರ ಹಿಸ್ಸೆಯ ಜಮೀನನ್ನು ನನ್ನ ಕುಟುಂಬಕ್ಕೆ ಪಡೆದುಕೊಳ್ಳಬೇಕೆಂದು ನನ್ನ ಮಗಳ ಮುಖಾಂತರ ಈ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಓ.ಎಸ್. ನಂ. 150/2024 ಇದೇ ನ್ಯಾಯಾಲಯದಲ್ಲಿ ಕೈಲಾಸ ಇವರ ಕುಟುಂಬ ವಿರದ್ದ ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ದಿನಾನಾಥ ಇವರು ದಿ: 27-02-2025 ರಂದು ಹಾಜರಾಗಿ ವಕೀಲರನ್ನು ನೇಮಕ ಮಾಡಿದ್ದಾರೆ ಎಂದರೆ ಸರಿ. ನಾನು ಪ್ರತಿವಾದಿಗೆ ಬರೆದುಕೊಟ್ಟ ಖರಿದಿ ಕರಾರು ಪತ್ರವನ್ನು ಒಂದು ವೇಳೆ ಪ್ರತಿವಾದಿ ಜಮೀನು ಮಾರಾಟ ಮಾಡುವ ಸಂದರ್ಭದಲ್ಲಿ ನನಗೆ ಮಾರಾಟ ಮಾಡಬೇಕೆಂದು ಒತ್ತಾಯ ಮಾಡಿದ ಸಲುವಾಗಿ ಆ ಆಧಾರಕ್ಕೆ ಪ್ರತಿವಾದಿಯು ನನಗೆ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ನನ್ನ ಅಣ್ಣನಿಗೆ ದುಡ್ಡು ಕೊಟ್ಟಿಲ್ಲಾ, ನಾನು ಅಣ್ಣನ ಪರವಾಗಿ ಒತ್ತಡ ಹಾಕಿದ್ದು ಆ ನಂತರ ನನಗೆ ಪ್ರತಿವಾದಿ ಆ ದುಡ್ಡು ಕೊಡದ ಭದ್ರತೆಗಾಗಿ ಕರಾರು ಪತ್ರ ಬರೆದುಕೊಟ್ಟಿದ್ದಾನೆಂದು ನುಡಿಯುತ್ತಾರೆ. ಪ್ರತಿವಾದಿ ಬರೆದುಕೊಟ್ಟ ಕರಾರು ಪತ್ರನಲ್ಲಿ ಆತ

**ಅಸಲು ದಾವಾ ನಂಃ 19/2023**

**ಪಿ.ಡಬ್ಲ್ಯೂಃ1 ,**

ರೂ.17,99,000/- ಹಣವನ್ನು ಕರಾರು ಪತ್ರದಲ್ಲಿ ಯಾಕೆ ನಮೂದಿಸಿಲ್ಲಾ, ರೂ.5,00,000/- ಹಣ ಯಾಕೆ ನಮೂದಿಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಕೊಡುವರು ಮತ್ತು ಕೊಳ್ಳುವರ ಸಮ್ಮತಿಯಲ್ಲಿ ನೊಂದಣೀ ದಾಖಲು ಆಗಿದೆ ಎಂದು ನುಡಿಯುತ್ತಾರೆ. ಸದರಿ ದಾಖಲೆ ನಮ್ಮ ಸಮ್ಮತಿಯಂತೆ ಆಗಿದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನನಗೆ ಕರಾರು ಪತ್ರ ಬರೆದು ಕೊಡುವ ಮುಂಚೆ ನಾನು ಕರಾರು ಪತ್ರ ಬರೆದುಕೊಡು ಅಂತಾ ಒತ್ತಡ ಹಾಕಿದ್ದೀರಾ ಪ್ರಶ್ನೆಗೆ ಇಬ್ಬರ ಸಮ್ಮತಿಯಂತೆ ಆಗಿದೆ ಎಂದು ನುಡಿಯುತ್ತಾರೆ. ನನಗೆ ಬರೆದುಕೊಟ್ಟ ಕರಾರಿನಲ್ಲಿ ರೂ.5,00,000/- ಯಾಕೆ ನಮೂದಿಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಇಬ್ಬರ ಸಮ್ಮತಿ ಮೇರೆಗೆ ಆಗಿದೆ ಎಂದು ನುಡಿಯುತ್ತಾರೆ. ನನಗೆ ಬರದುಕೊಟ್ಟ ಕರಾರಿನಲ್ಲಿ ರೂ.17,99,000/- ಬರೆಸಿಲು ಏನು ತೊಂದರೆ ಇತ್ತು ಪ್ರಶ್ನೆಗೆ ಸಾಕ್ಷಿ ಇಬ್ಬರ ಸಮ್ಮತಿ ಮೇಲೆ ಆಗಿ ಆತ ವಿಶ್ವಾಸ ಮೇಲೆ ಕೊಡುತ್ತಾನೆ ಎಂದು ಹೇಳಿದ ಮೇರೆಗ ಬರೆಸಿಲ್ಲಾ ಎಂದು ನುಡಿಯುತ್ತಾರೆ. ದಿನಾನಾಥನ ಸಹಿಯನ್ನು ಆ ಕರಾರು ಪತ್ರದ ಮೇಲೆ ಪಡೆಯಲು ಪ್ರಯತ್ನ ಪಟ್ಟಿಲ್ಲಾ ಸಾಕ್ಷಿ ಮುಂದುವರೆದು ಆತ ಸೊಲ್ಲಾಪೂರದಲ್ಲಿ ಇದ್ದ ಎಂದು ನುಡಿಯುತ್ತಾರೆ. ದಿನಾನಾಥ ಮತ್ತು ಅವರ ಹೆಂಡತಿ ಅವರ ಕುಟುಂಬದ ವ್ಯವಹಾರ ಸಲುವಾಗಿ ಅವರ ಹೆಂಡತಿ ಖಾತೆಯಲ್ಲಿ ಹಣದ ವ್ಯವಹಾರ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ಸುಲಭಾ ಇವರ ಖಾತೆ ಇದೆಯೋ ಇಲ್ಲಾ ಗೊತ್ತಿಲ್ಲಾ. ಸುಲಭಾ ಇವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುಲು ಯಾವುದೇ ತೊಂದರೆ ಇಲ್ಲಾ. ನಾನು, ದಿನಾನಾಥ, ಆತನ ಹೆಂಡತಿ ಸುಲಭಾ, ನನ್ನ ಮಕ್ಕಳಾದ ಲಕ್ಷೀ, ಆವಂತಿಕಾ ನಮ್ಮ ಕುಟುಂಬದ ಯಾವುದೆ ಜಮೀನು ಮಾರಾಟ ಮಾಡಿದ ನಂತರ ಅದನ್ನು ಮರಳಿ ಪಡೆಯಲು ನ್ಯಾಯಾಲಯದಲ್ಲಿ ಸುಳ್ಳು ದಾವೆಯನ್ನು ಹೂಡುವ ನಾವು ಪ್ರವೃತ್ತಿ ಹೊಂದಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**

ಚಿತ್ತಾಪೂರ.